THROUGH HUMANITY TO PEACE
ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ
Indian Red Cross Society
(CONSTITUTED UNDER PARLIAMENT ACT XV OF 1920)
KARNATAKA STATE BRANCH
100 years of minimizing, alleviating and preventing human suffering
Phone : 080-22264205, 22352127
E-mail :ircskar@gmail.com, ircskarnataka@yahoo.in
Website : www.redcrosskarnataka.org

No. IRCS /CIRCULAR/4035/2026-27 Date : 28/07/2026

## ಸುತ್ತೋಲೆ

ಗೆ,

**ಎಲ್ಲಾ ಪ್ರಾಂಶುಪಾಲರು ಹಾಗೂ ಯುವ ರೆಡ್ ಕ್ರಾಸ್ ಕಾರ್ಯಕ್ರಮ ಅಧಿಕಾರಿಗಳು**
ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪದವಿ, ಇಂಜಿನಿಯರಿಂಗ್, ಪಾಲಿಟೆಕ್ನಿಕ್,
ಕಾನೂನು, ಕೃಷಿ, ಶಿಕ್ಷಕರ ಶಿಕ್ಷಣ ಕಾಲೇಜುಗಳು
ಕರ್ನಾಟಕ ರಾಜ್ಯ.

ಮಾನ್ಯರೆ,

**ವಿಷಯ: ಯುವ ರೆಡ್ ಕ್ರಾಸ್ ಕಾಲೇಜು ಮಟ್ಟದ ಸಲಹಾ ಸಮಿತಿ, ವಿದ್ಯಾರ್ಥಿ ವ್ಯವಸ್ಥಾಪನ ಸಮಿತಿ ಹಾಗೂ ಕೋರ್ ಗ್ರೂಪ್ ಸ್ವಯಂಸೇವಕರ ವಿವರಗಳನ್ನು ಸಂಬಂಧಿಸಿದ ವಿಶ್ವವಿದ್ಯಾಲಯದ ಯುವ ರೆಡ್ ಕ್ರಾಸ್ ನೋಡಲ್ ಅಧಿಕಾರಿಗಳಿಗೆ ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ರಾಜ್ಯ ಮತ್ತು ಜಿಲ್ಲಾ ಶಾಖೆ ಬೆಂಗಳೂರು ಇಲ್ಲಿಗೆ ಸಲ್ಲಿಸುವ ಕುರಿತು.**

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ಇಡಿ 64 ವಿವಿಧ 2011, ದಿನಾಂಕ: 22.12.2011
2. ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಸುತ್ತೋಲೆ ದಿನಾಂಕ: 31.12.2025
3. ಸರ್ಕಾರದ ಆದೇಶ ಸಂಖ್ಯೆ: ಇಡಿ 38 ವಿವಿಧ 2016, ದಿನಾಂಕ: 17.06.2016

*-*-*-*-*-*

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಕರ್ನಾಟಕ ಸರ್ಕಾರದ ಆದೇಶಗಳ ಅನ್ವಯ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಖಾಸಗಿ ಪದವಿ, ಇಂಜಿನಿಯರಿಂಗ್, ಪಾಲಿಟೆಕ್ನಿಕ, ಕೃಷಿ, ಶಿಕ್ಷಕರ ಶಿಕ್ಷಣ, ಕಾನೂನು, ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಯುವ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಸುವಂತೆ ಸರ್ಕಾರ ಆದೇಶಿಸಿದೆ.

ಸರ್ಕಾರದ ಆದೇಶದಂತೆ ಪ್ರತಿಯೊಂದು ಕಾಲೇಜು ವಾರ್ಷಿಕವಾಗಿ ವಿದ್ಯಾರ್ಥಿಗಳಿಂದ ಯುವ ರೆಡ್ ಕ್ರಾಸ್ ಸದಸ್ಯತ್ವ ಶುಲ್ಕ ರೂ.50/- (ಪ್ರತಿ ವಿದ್ಯಾರ್ಥಿಯಿಂದ) ಅನ್ನು ಸಂಗ್ರಹಿಸಿ, ಅದರ 70% (35) ಅನ್ನು ಕಾಲೇಜು ಮಟ್ಟದ ಯುವ ರೆಡ್ ಕ್ರಾಸ್ ಚಟುವಟಿಕೆಗಳಿಗೆ ಬಳಸಬೇಕು ಹಾಗೂ ಉಳಿದ 30% (15) ಮೊತ್ತವನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ ಪಾವತಿಸಿವುದು.

ಕಾಲೇಜು ಹಂತದಲ್ಲಿ ಉಳಿಸಿಕೊಂಡ 70% (35)ಅನ್ನು ಬಳಸಿಕೊಂಡು ಯುವ ರೆಡ್ ಕ್ರಾಸ್ ಘಟಕಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಉಲ್ಲೇಖಿತ (3)ರ ಸರ್ಕಾರಿ ಆದೇಶದಲ್ಲಿ ಯುವ ರೆಡ್ ಕ್ರಾಸ್-ನೀತಿ, ಆಡಳಿತಾತ್ಮಕ ನಿರ್ದೇಶನಗಳು ಮತ್ತು ಕಾರ್ಯಕ್ರಮ ಮಾರ್ಗದರ್ಶಿಸೂತ್ರಗಳನ್ನು ನೀಡಿದೆ. ಅದರಂತೆ ಕೆಳಕಂಡ ಸಮಿತಿಗಳನ್ನು ಕಡ್ಡಾಯವಾಗಿ ರಚಿಸಬೇಕು.

ಮುಂದುವರಿದಿದೆ......2

1. **ಕಾಲೇಜು ಮಟ್ಟದ ಸಲಹಾ ಸಮಿತಿ:**
   - ಪ್ರಾಂಶುಪಾಲರು –ಅಧ್ಯಕ್ಷರು
   - ಯುವ ರೆಡ್ ಕ್ರಾಸ್ ಕಾರ್ಯಕ್ರಮ ಅಧಿಕಾರಿ- ಕಾರ್ಯದರ್ಶಿ
   - ಬೋಧಕ ವರ್ಗದಿಂದ ಒಬ್ಬ ಪ್ರತಿನಿಧಿ- ಸದಸ್ಯರು
   - ವಿದ್ಯಾರ್ಥಿ ಉಪಾಧ್ಯಕ್ಷರು–ಸದಸ್ಯರು
   - ವಿದ್ಯಾರ್ಥಿ ಕಾರ್ಯದರ್ಶಿ–ಸದಸ್ಯರು
   - ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ/ತಾಲ್ಲೂಕು ಶಾಖೆಯ ಪ್ರತಿನಿಧಿ–ಸದಸ್ಯರು

2. **ವಿದ್ಯಾರ್ಥಿ ವ್ಯವಸ್ಥಾಪನ ಸಮಿತಿ:**

ಯುವ ರೆಡ್ ಕ್ರಾಸ್ ಸ್ವಯಂಸೇವಕರಿಂದ 10 ಸದಸ್ಯರ ವಿದ್ಯಾರ್ಥಿ ವ್ಯವಸ್ಥಾಪನಾ ಸಮಿತಿಯನ್ನು ರಚಿಸಬೇಕು, ಈ ಸಮಿತಿಯ ಪ್ರಥಮ ಸಭೆಯಲ್ಲಿ ಈ ಕೆಳಕಂಡ ವಿದ್ಯಾರ್ಥಿ ಪದಾಧಿಕಾರಿಗಳನ್ನು ಆಯ್ಕೆ ಮಾಡಬೇಕು.

- ವಿದ್ಯಾರ್ಥಿ ಉಪಾಧ್ಯಕ್ಷರು
- ವಿದ್ಯಾರ್ಥಿ ಕಾರ್ಯದರ್ಶಿ
- ಜಂಟಿ ಕಾರ್ಯದರ್ಶಿ

ಯುವ ರೆಡ್ ಕ್ರಾಸ್ ಕಾರ್ಯಕ್ರಮ ಅಧಿಕಾರಿಯವರು ಈ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಬೇಕು

3. **ಕೋರ್ ಗ್ರೂಪ್ ಸ್ವಯಂಸೇವಕರು:**

ಯುವ ರೆಡ್ ಕ್ರಾಸ್ ಸದಸ್ಯರಲ್ಲಿ ಸೇವಾ ಮನೋಭಾವ ಹೊಂದಿರುವ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಕೋರ್ ಗ್ರೂಪ್ ಸ್ವಯಂಸೇವಕರ ತಂಡವನ್ನು ರಚಿಸಬೇಕು.

- ಪ್ರತಿ ಯುವ ರೆಡ್ ಕ್ರಾಸ್ ಘಟಕದಲ್ಲಿ 100 ಕೋರ್ ಗ್ರೂಪ್ ಸ್ವಯಂಸೇವಕರು ಅಥವಾ ಒಟ್ಟು ಸದಸ್ಯರ 33% (ಯಾವುದು ಅನ್ವಯವಾಗುವುದೋ ಅದು) ಒಳಗೊಂಡಿರಬೇಕು
- 300 ಅಥವಾ ಅದಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿರುವ ಕಾಲೇಜುಗಳಲ್ಲಿ ಒಂದಕ್ಕಿಂತ ಹೆಚ್ಚು ಯುವ ರೆಡ್ ಕ್ರಾಸ್ ಘಟಕಗಳನ್ನು ರಚಿಸಬಹುದು.
- 300ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಕಾಲೇಜುಗಳಲ್ಲಿ ಲಭ್ಯ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಘಟಕವನ್ನು ರಚಿಸಬಹುದು.

4. **ಕಾರ್ಯಕ್ರಮ ಅಧಿಕಾರಿಗಳ ನೇಮಕ:**

ಕಾರ್ಯಕ್ರಮ ಅಧಿಕಾರಿಯನ್ನು ಈ ಕೆಳಕಂಡವರಿಂದ ನೇಮಕ ಮಾಡಬೇಕು.

- ಬೋಧಕ ವರ್ಗದ ಸದಸ್ಯರು
- ದೈಹಿಕ ಶಿಕ್ಷಣ ನಿರ್ದೇಶಕರು
- ಗ್ರಂಥಪಾಲಕರು
- ಅಗತ್ಯವಿದ್ದಲ್ಲಿ ಅರ್ಹ ತಾತ್ಕಾಲಿಕ ಬೋಧಕ ವರ್ಗ

ಯುವ ರೆಡ್ ಕ್ರಾಸ್ ಕಾರ್ಯಕ್ರಮ ಅಧಿಕಾರಿಗಳ ನೇಮಕಾತಿಯಲ್ಲಿ ಈಗಾಗಲೇ ರಾಷ್ಟ್ರೀಯ ಸೇವಾ ಯೋಜನೆ (NSS) ಅಥವಾ ರಾಷ್ಟ್ರೀಯ ವಿದ್ಯಾರ್ಥಿ ದಳ (NCC) ಕಾರ್ಯಕ್ರಮ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಬೋಧಕರನ್ನು ಹೊರತುಪಡಿಸಿ, ಇತರೆ ಅರ್ಹ ಬೋಧಕರನ್ನು ಕಾರ್ಯಕ್ರಮ ಅಧಿಕಾರಿಗಳಾಗಿ ನೇಮಕ ಮಾಡುವುದರಿಂದ ಯುವ ರೆಡ್ ಕ್ರಾಸ್ ಕಾರ್ಯಕ್ರಮಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಸಲು ಸಹಕಾರಿಯಾಗುತ್ತದೆ.

**ಮುಂದುವರಿದಿದೆ.......3**

ಇದರಿಂದ ಒಬ್ಬರ ಮೇಲಿನ ಎರಡು ಅಥವಾ ಹೆಚ್ಚಿನ ಕಾರ್ಯಕ್ರಮಗಳ ಕಾರ್ಯಭಾರ ಕಡಿಮೆಯಾಗುವುದರಿಂದ, ಪ್ರತಿಯೊಂದು ಕಾರ್ಯಕ್ರಮವನ್ನು ಪ್ರತ್ಯೇಕವಾಗಿ ಯೋಜಿಸಿ ಸಮರ್ಪಕವಾಗಿ ನಿರ್ವಹಿಸಿ, ಅಗತ್ಯ ಸಮಯ, ಗಮನ ಹಾಗೂ ಮೇಲ್ವಿಚಾರಣೆಯೊಂದಿಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಸಲು ಅನುಕೂಲವಾಗುತ್ತದೆ.

**ಎಲ್ಲಾ ಕಾಲೇಜುಗಳು 2026-27ನೇ ಸಾಲಿಗೆ ಕೆಳಕಂಡ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಸಿದ್ಧಪಡಿಸಿ, ಸಂಬಂಧಿಸಿದ ವಿಶ್ವವಿದ್ಯಾಲಯದ ಯುವ ರೆಡ್ ಕ್ರಾಸ್ ನೋಡಲ್ ಅಧಿಕಾರಿಗಳಿಗೆ ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಬೆಂಗಳೂರು ಇಲ್ಲಿಗೆ ಕಡ್ಡಾಯವಾಗಿ ಸಲ್ಲಿಸಬೇಕು.**

1. ಕಾಲೇಜು ಸಲಹಾ ಸಮಿತಿ (College Advisory Committee) ಸದಸ್ಯರ ವಿವರಗಳು.
2. ವಿದ್ಯಾರ್ಥಿ ವ್ಯವಸ್ಥಾಪನಾ ಸಮಿತಿ (Student Management Committee) ಸದಸ್ಯರ ವಿವರಗಳು.
3. ಕೋರ್ ಗ್ರೂಪ್ ಸ್ವಯಂಸೇವಕರ (Core Group Volunteers) ಸಂಪೂರ್ಣ ಪಟ್ಟಿ.

| ಕ್ರಂ. ಸಂಖ್ಯೆ | ವಿದ್ಯಾರ್ಥಿ ಹೆಸರು | ತರಗತಿ | ಹುಟ್ಟಿದ ದಿನಾಂಕ | ತಂದೆಯ ಹೆಸರು |
|---|---|---|---|---|

4. ಯುವ ರೆಡ್ ಕ್ರಾಸ್ ಕಾರ್ಯಕ್ರಮ ಅಧಿಕಾರಿಯ ನೇಮಕಾತಿ ಆದೇಶದ ಪ್ರತಿ.
5. ಪ್ರಸ್ತುತ ಶೈಕ್ಷಣಿಕ ಸಾಲಿನ ಯುವ ರೆಡ್ ಕ್ರಾಸ್ ಸದಸ್ಯರ ಒಟ್ಟು ಸಂಖ್ಯೆ.

**ಯುವ ರೆಡ್ ಕ್ರಾಸ್ ಕಾರ್ಯಕ್ರಮವು ಕರ್ನಾಟಕ ಸರ್ಕಾರದ ಆದೇಶದನ್ವಯ ಕಡ್ಡಾಯವಾಗಿ ಅನುಷ್ಠಾನಗೊಳ್ಳಬೇಕಾದ ಕಾರ್ಯಕ್ರಮವಾಗಿರುವುದರಿಂದ, ಎಲ್ಲಾ ಪ್ರಾಂಶುಪಾಲರು ಹಾಗೂ ಕಾರ್ಯಕ್ರಮ ಅಧಿಕಾರಿಗಳು ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಸಮಿತಿಗಳನ್ನು ರಚಿಸಿ ದಿನಾಂಕ 31/08/2026ರೊಳಗೆ ಮಾಹಿತಿಯನ್ನು ಸಲ್ಲಿಸುವಂತೆ ಕೋರಲಾಗಿದೆ.**

**ಈ ವಿಷಯವನ್ನು ಅತ್ಯಂತ ಮಹತ್ವದ ಹಾಗೂ ತುರ್ತು ಕಾರ್ಯವೆಂದು ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.**

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆಯ ಕಾರ್ಯದರ್ಶಿಗಳ, ಎಲ್ಲಾ ವಿಶ್ವವಿದ್ಯಾಲಯಗಳ ಯುವ ರೆಡ್ ಕ್ರಾಸ್ ನೋಡಲ್ ಅಧಿಕಾರಿಗಳು ಮತ್ತು ರಾಜ್ಯ ಶಾಖೆಯ ಸಂಪರ್ಕ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ ಹಾಗೂ https://redcrosskarnataka.org/ ಜಾಲತಾಣದಲ್ಲಿ ಮಾಹಿತಿಯು ಲಭ್ಯವಿರುತ್ತದೆ

**ವಂದನೆಗಳೊಂದಿಗೆ**

**ತಮ್ಮ ವಿಶ್ವಾಸಿ**

**ಪ್ರಧಾನ ಕಾರ್ಯದರ್ಶಿಗಳು**
**ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ**

**ಪ್ರತಿ:**

- ಮಾನ್ಯ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ ಉನ್ನತ ಶಿಕ್ಷಣ ಸೌಧ ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
- ಎಲ್ಲಾ ವಿಶ್ವವಿದ್ಯಾಲಯಗಳ ಯುವ ರೆಡ್ ಕ್ರಾಸ್ ನೋಡಲ್ ಅಧಿಕಾರಿಗಳು-ಅಗತ್ಯ ಕ್ರಮಕ್ಕಾಗಿ
- ಕಾರ್ಯದರ್ಶಿಗಳು/ಸಭಾಪತಿಗಳು ಎಲ್ಲಾ ಜಿಲ್ಲಾ ರೆಡ್ ಕ್ರಾಸ್ ಶಾಖೆಗಳು.
- ಮಾನ್ಯ ನಿರ್ದೇಶಕರು, ಯುವ ರೆಡ್ ಕ್ರಾಸ್ ಉಪಸಮಿತಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ.
- ಎಲ್ಲಾ ಆಡಳಿತ ಮಂಡಳಿ ಸದಸ್ಯರು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ.
- ಕಚೇರಿ ಪ್ರತಿ.

| | | | |
|---|---|---|---|
| 1. | **Dr. Veda C.V**<br>Assistant Professor and Coordinator,<br>Department of Social Work,<br>**Bangalore University,**<br>Bengaluru-56. Karnataka<br>E-mail:vedacv.msw@gmail.com<br>Mobile:7259115352 | 2. | **Dr. Govinda Gowda HG**<br>Youth Red Cross Nodal Officer,<br>**Bangalore City University,**<br>NSS and Indian Red Cross Society Nodal Officer,<br>Central College Campus, Dr. Ambedkar VEedi,<br>Bangalore – 560001<br>Mob: 9844169326<br>nssbcu@gmail.com<br>gowda0212@gmail.com |
| 3. | **Dr. K. Narayan**<br>Youth Red Cross Nodal Officer,<br>**Bangalore North University,**<br>Govt. First Grade College<br>Robert Sin Pete, KGF<br>Bengaluru-563122<br>Mob: 8073936448<br>Email : knarayana67@gmail.com | 4. | **Dr. Devata.D.Gasti**<br>Youth Red Cross Nodal Officer<br>Assitant Professor,/ Nodal Officer<br>Department of Social Work,<br>**Rani Channamma University**<br>Belagavi - 591156<br>Mob: 9902521386<br>Email: yrcrcub@gmail.com<br>devataps@gmail.com |
| 5. | **Dr. Ravindra Gouda S.M**<br>Youth Red Cross Nodal Officer,<br>**Kuvempu University**<br>Assistant Director of the Physical Education<br>Jnana Sahyadri,<br>Shankaraghatta-577451<br>Shimoga District.<br>Mob: 9886852688<br>Email: sportsravga@gmail.com | 6. | **Sri. Dwarakanath**<br>Youth Red Cross Nodal Officer,<br>**Tumkur University,**<br>University office, B.H.Road,<br>Tumkur-572 103,<br>Tumkur District<br>Mob: 7760876622 |
| 7. | **Dr. Kotresh D**<br>Youth Red Cross Nodal Officer,<br>**Davanagere University,**<br>Associate Professor,<br>Department of Botany<br>Shivagangotri,<br>Davanagere-577007,<br>Mob: 8147319004<br>Email: dkotresh@gmail.com | 8. | **Dr. Gayathri N**<br>Youth Red Cross Nodal Officer,<br>**Mangalore University,**<br>Department of Sociology.<br>University College,<br>Mangalore- 575001<br>Mob: 9945990963<br>Email: gayathriaminmaroli@gmail.com<br>Yrcmangalore02@gmail.com |
| 9. | **Dr. Rajendra Prasad**<br>Youth Red Cross Nodal Officer &<br>Associate Professor<br>**Vijayanagara Sri Krishnadevaraya University,**<br>Jnana Sagara Campus, Cantonment<br>Ballari-583105<br>Mob: 7204508224<br>Email: nalluprasad80@gmail.com | 10. | **Dr. Kalavathi.H. Kamble**<br>Youth Red Cross Nodal Officer,<br>**Karnataka State Akkamahadevi Women's University,**<br>Assistant Professor<br>Department of Social Work<br>Vijayapura-586108<br>**Mob: 9986790913**<br>Email: kalavatimsw@gmail.com |
| 11. | **Sri. Vinay Kumar Hittalamani**<br>Youth Red Cross Nodal Officer,<br>**VisvesvarayaTechnological University,**<br>"Jnana Sangama",<br>Belgagavi-590 018,<br>Belgaum District.<br>Mob: 7406091923<br>Off:08312498251<br>Email: vinaykumar103@gmail.com | 12. | **Dr. S. G. Chalavadi,**<br>Youth Red Cross Nodal Officer,<br>**Karnataka University,**<br>Pavate Nagar,<br>Dharwad- 580 003, Dharwad District.<br>Mob: 8970276353<br>Office: 0836-2215257<br>Email: drsgchalawad@gmail.com |

| | | | |
|---|---|---|---|
| 13. | **Prof. Basavaraj Sannakki,**<br>Youth Red Cross Nodal Officer,<br>**Gulbarga University,**<br>Jnana Ganga<br>Kalaburagi – 585106<br>Mob: 94492 92894<br>Off: 08472-263202<br>Email: sannakki.phy@gmail.com | 14. | **Dr. Bheemabai,IS. Mulage,**<br>Youth Red Cross Nodal Officer,<br>**Karnataka State Law University,**<br>Assistant Professor of Law<br>Navanagar, Hubballi- 580025<br>Mob: 7892489433<br>Email: bheemakslu@gmail.com |
| 15. | **Dr. Divakar Chandy,**<br>Youth Red Cross Nodal Officer,<br>**University of Mysore**<br>University Evening College,<br>Vishwavidyalaya Karya Soudha,<br>Craford Bhavan,<br>Mysore-570 005<br>Ph: 99865 30122<br>Email: diwakarchandy1@gmail.com | 16. | **The Director,**<br>**Youth Red Cross Nodal Officer**<br>**Dr. Maruti**<br>**Department of Technical Education,**<br>Palace Road,<br>Bengalore-560 001,<br>Bangalore District<br>Off: 080-22200777<br>Mob No:8310943097<br>Email: director182016@gmail.com<br>email:dte.commissioner@gmail.com |
| 17. | **Dr. Vasanth Shetty,**<br>Youth Red Cross Nodal Officer,<br>**Rajeev Gandhi University of Health Sciences,**<br>4th T Block, Jayanagar,<br>Bengaluru-560041,<br>Bengaluru District<br>Dr.b.vasanthshetty@gmail.com/bpg79779@gmail.com<br>**Ph: 080-26961928/1947/08029601942**<br>**9448618501** | 18. | **Dr. Bhavani**<br>Youth Red Cross Nodal Officer,<br>**University of Agriculture Sciences**<br>GKVK, Bangalore - 560065<br>Mob: 9739937377<br>Email: harinikumarkm@gmail.com (Finance Officer)<br><bhavanip@uasbangalore.edu.in> |
| 19. | **Dr.K.S. Bhagya Jyothi**<br>School of Commerce & Management Studies<br>**Dayananda Sagar University,**<br>Innovation Campus,<br>Kudlu Gate, Hosur Main Road, Bangalore – 560068<br>Mobile No: 9901777258 | 20. | **Dr. Vijendra Kumar**<br>Youth Red Cross Nodal Officer,<br>**PES University**<br>Outer Ring Road, Banashankari, 3rd Stage,<br>Banashankari, Bengaluru - 560085<br>Mob No: 9741056503<br>Email: admissions@pes.edu<br>vijendrak@pes.edu |
| 21. | **Prof. Rajanna**<br>Youth Red Cross Nodal Officer,<br>Agriculture University,<br>**University of Agriculture Science, Raichur**<br>UAS Campus, Lingasugur Road,<br>Raichur-584104<br>Mob: 9448807931<br>Email: rajannauas@gmail.com | 22. | **Dr. Sateesh Arakeri**<br>Youth Red Cross Nodal Officer &<br>**BLDE (Deemed to be University)**<br>Associate professor<br>Department of Pharmacology<br>SHRI. B.M. Patil Medical College, Hospital and Research Centre, Bangaramma Sajjan Campus, Solapur Road,<br>Vijayapura (Bijapura)-586103<br>Mob: 7259566404 |
| 23. | **Dr. Santanu Saha,**<br>Youth Red Cross Nodal Officer,<br>**Nitte (Deemed to be University)**<br>Assistant Professor, Department of Pharmacognosy,NGSMIPS,<br>Kotekat Beeti Road,<br>Deralakatte, Mangalore-575018<br>Mob: 9916222729<br>Email: yrc@nitte.edu.in | **24.** | **Dr. Rajashekhar M. Hiremath.**<br>**University of Horticultural Sciences**<br>Deputy Director of Student's Welfare<br>Youth Red Cross Nodal Officer,<br>Bagalkote - 587104.<br>Mob: 9448647003<br>Email: pressports9@gmail.com |

| | | | |
|---|---|---|---|
| 25. | **Dr. M. Mune Gowda**<br>Youth Red Cross Nodal Officer,<br>**REVA University**<br>Rukmini Knowledge Park,<br>Kattigenahalli Yelahanka,<br>Bangalore 560064<br>Mob: 9972303399<br>Email: munegowda.m@reva.edu.in | **26.** | **Dr. T. Ravindra Naik**<br>Associate Professor,<br>Youth Red Cross Nodal Officer,<br>HOD, Department of Statistics, School of Science,<br>**Maharani Cluster University,**<br>Palace Rd, opposite Freedom Park, Racecourse, Gandhi Nagar, Bengaluru – 560001<br>Mob No: 9901766774<br>raviisecyahoo@co.uk |
| 27. | **Mr. Somaling Karni,**<br>Youth Red Cross Nodal Officer,<br>**Mahatma Gandhi Rural Development and Panchayat Raj University"**<br>Old DC office Circle,<br>Raith Bhavan,<br>Gadag-582101.<br>Mob: 8217721324<br>Email Id :- somaling.rk.msw@gmail.com | **28.** | **Dr. Nithyashree.B.V**<br>Youth Red Cross Nodal Officer<br>**Yenepoya (Deemed to be Univresity)**<br>Deralakatte Mangaluru - 575018 Dakshina Kannada District<br>Email: nitya.bv@gmail.com<br>Mob: 9480230906 |
| 29 | **Dr. M Ravi**<br>Youth Red Cross Nodal Officer,<br>**Adikavi Sri Maharshi Valmiki University, RAICHUR UNIVERSITY**<br>Assistant Professor<br>M.Sc,M.Phil, Ph.D<br>Department of Computer Science,<br>University, Raichur,<br>Redcross SDRT Member & Resource Person<br>Govt. First Grade College, Raichur.<br>M- +91-9945436923<br>E-mail: ravimsk27@gmail.com (Personal) | **30** | **Dr. Sanjay V Kotabagi**<br>Youth Red Cross Nodal Officer,<br>**KLE Technological University,**<br>Professor-School of Mechanical Engineering<br>Dean- Student Affairs<br>B.V. Bhoomaraddi College Campus<br>Vidyanagar, Hubballi. 580 031<br>Mob: 9448564580<br>Email: dean_sw@kletech.ac.in |
| 31. | **Dr. Balabheem Saibanna**<br>Youth Red Cross Nodal Officer,<br>**Nrupathunga University**<br>Nrupathunga Road,<br>Bengaluru - 560001<br>Mob No: 91 9448963204<br>Email- balabheem.21@gmail.com | 32. | **Dr. Ravindra BN**<br>Youth Red Cross Nodal Officer,<br>**Adichunchanagiri University**<br>Assistant Professor,<br>Department of Pharmacy, Practice<br>Sri. Adichunchanagiri College of Pharmacy,<br>B.G.Nagara – 571448, NH-75, Nagamangala Taluk,<br>Mandya District<br>**Mob: ................**<br>**Email: bnravindra@accp.co.in** |
| 33. | **Karnataka Vaternary Animal & Fisheries Sciences University**<br>**Dr. A.T. Ramachandra Nak**<br>Director of Student Welfare,<br>Nandinagar,<br>Bidar-585 401<br>Mob: 9916924084<br>Email: dswkvafsu@gmail.com<br>regkvafsu@gmail.com | 34. | **Dr. Geeta Tamgale,**<br>Youth Red Cross Nodal Officer<br>**University of Agricultural Sciences Dharwad**<br>Assistant Professor,<br>Dept. Of Extension & Communication Management,<br>College of Community Science<br>Dharwad -580005<br>Email: tamagales@uasd.in<br>dsw@uasd.in<br>Mobile No: 9448552745 |

| | | | |
|---|---|---|---|
| 35. | **Dr. Lokesh A**<br>Assistant Professor<br>Department : Economics<br>**St. Joseph's University Bengaluru**<br>St Joseph's University,<br>36 Lalbagh Road, Bengaluru-560027,<br>Email: **lokesh.a@sju.edu.in**<br>Mobile No: 9916646470 | 36. | **Dr.Rajeshwari S. Mathad**<br>Youth Red Cross Nodal Officer<br>**Bagalkot University**<br>Mudhol Road, Jamkhandi – 587301,<br>Bagalkot District<br>Emailid: bgkujkd@gmail.com ,<br><ircskar@bgku.ac.in><br>Tel No: (08353)295123,295124<br>Mob No: 9480536112<br>drbgku@gmail.com<br>Register: rebgku@gmail.com<br>Vice Chancellor: vcbgku@gmail.com<br>drbgku@gmail.com |
| 37. | **Dr. Prabha Swamy.S**<br>Assistant Professor<br>Department of Manuseriptology<br>**Karnataka Sanskrit University**<br>Pampa Mahakavi Road,<br>Chamarajpet, Bangalore – 560018<br>karnatakasanskrituniversity@gmail.com<br>prabhus2021@gmail.com<br>Mob No: 94802075373 | 38. | **Dr. Zameer Ahmed**<br>**Kodagu University**<br>Jnana Kaveri Campus, Chikkaaluvara,<br>Kushalnagar, Kodagu- 571232<br>**Mob No: 9845821071**<br>Zameerkonanur@gmail.com<br>Kodagu University: **8660857379** |
| 39. | **Dr. Vaidyanatha U**<br>Youth Red Cross Nodal Officer & Assistant Director of Physical Education and Sports<br>Correspondence Address: City Campus@Ballari Business, College, Siruguppa Road, Ballari - 583103<br>**Kishkinda University, Ballari**<br>Mob: 9538830401<br>Email Id:<br>**vaidyanath@kishkindauniversity.edu.in** | 40 | **Mr. Manjunatha.Y**<br>Nodal Officer – Youth Red Cross Wing<br>**GM University**<br>P.B. Road, Davanagere<br>**manjunathy@gmit.ac.in**<br>8792049134/9663368484<br>director.sa@gmu.aci.in |
| 41 | **Ms. Hajeera Nasreen**<br>**Chamarajanagara University**<br>Suvarnagangotri, Chamarajanagara,<br>Karnataka – 571313,<br>Mob: 9035385707<br>**chamarajanagaruniversity@gmail.com**<br>**hajeeranasreen15418@gmail.com** | 42. | **Dr. Lokesh K.P**<br>Assistant Professor<br>**Mandya University**<br>MC Road, Mandya – 571401<br>Mob: 9964058325 |
| 43. | Dr. B. S. Ravikumar<br>**Hassan University,**<br>Hemagangothri, Hassan – 573226<br>Mob: 9448535808<br>Email ID: prakum5601@gmail.com | 44. | **Dr. Sunil Kumar G,**<br>Dept. of CSE, UVCE, Bengaluru<br>**University of Visvesvaraya College of Engineering**<br>KR Circle, Bengaluru – 560001<br>Mob No: 9916382926 |
| 45. | Dr. Vishishta Nagaraj<br>**JSS Science and Technology University**<br>(Sri Jayachamarajendra Engineering college)<br>Mysuru- 570006<br>Mob No:09986568230<br>Email: vishnunagraj@sjce.ac.in | 46. | Dr. Prithvi Raj<br>**Bidar University**<br>Bidar Gnyana Karanji, Halhalli (K), Bhalki Taluk, Bidar District - 585414- Contact No. : 9731781016<br>Mob No: 8970494225 |

| | | | |
|---|---|---|---|
| 47. | **Dr. Abhishek Patel**<br>**Chanakya University**<br>NH - 648, Haraluru - Polanahalli Near Kempegowda International Airport Devanahalli, Bengaluru – 562110<br>**abhishek.p@chanakyauniversity.edu.in**<br>**Mob No: 9144418241** | 48. | **Dr. Gazala Shaireen, Associate Professor**, Administrative Office<br>**Khaja Bandanawaz University, Gulbarga**<br>Administrative Building,<br>Khaja Bandanawaz University Campus,<br>Rauza-i Buzurg, KALABURAGI - 585104.<br>Tel : 08472 - 245555, 236041, 228540, 224591, 267657.<br>Fax: 08472 - 271111<br>Email : contact@kbn.university<br>registrar@kbn.university<br>vc@kbn.university<br>**Mob No: 8050401976**<br>**shaireen@kbn.university** |

| | | | |
|---|---|---|---|
| 49. | **Kannada University**<br>**The Finance Officer,**<br>Vidyaranya – 583 276, Hospet (Taluk)<br>Vijayanagara (Dist.) Karnataka (<br>**Mob No:- 9480395800** | 50. | **Keladi Shivappa Nayaka University of Articultural & Horticltural Sciences, Shivamogga**<br>Sagar Taluk, Shivamogga, Phone Number :<br>Head-Office : Phone: 09480838958<br>Email Address :<br>registrar@uahs.edu.in<br>College of Horticulture, Hiriyur- Dr. Suresh D. Ekabote, Office:- 9480838962<br>College of Horticulture, Mudigere<br>Contact Person:Dr.V. Srinivasa: 9480838961 |

# +RED CROSS DISTRICT BRANCHES

| | | | | | |
|---|---|---|---|---|---|
| 1. | Sri M. R. Mahesh<br>Secretary,<br>Indian Red Cross Society,<br>Bengaluru Urban District Branch<br>1st Floor, Kandhaya Bhavan<br>K.G. Road, Bengaluru - 560009<br>M: 6364076239/7829700014<br>Email : ircsurban@gmail.com | 5. | Sri. M.A. Shakeeb,<br>District Secretary,<br>Indian Red Cross Society,<br>Bellary District Branch,<br>C/O Office of the District Commandant,<br>Karnataka Home Guards, Stadium Road,<br>Near Ranga Mandir,<br>BALLARI – 583 101<br>(M) 9483641234/9845145046<br>Email:ircsbay@gmail.com | 9. | Sri Rasool Khan<br>Secretary<br>Indian Red Cross Society<br>Chikkamagalur District Branch<br>Deputy Commissioners Office<br>Premises, Hosamane Extension<br>CHIKMAGALUR -577 101<br>M : 9449497993<br>Email : ircsckm21@gmail.com |
| 2. | Dr. Parameshwara<br>Secretary,<br>Indian Red Cross Society,<br>Bangalore Rural District Branch<br>THO Office, Old Hospital Compound,<br>Doddaballapura – 561 203<br>M : 9900266748 | 6. | Prof. S. N. Mulimani<br>Secretary,<br>Indian Red Cross Society,<br>Belagavi District Branch,<br>475, Shanti Nivas, 3rd Stage, Sch.No.40,<br>Hanuman Nagar, ,<br>Belagavi-590 001<br>Ph: 9448907581 | 10. | Sri. Mazaharulla.N<br>Secretary<br>Indian Red Cross Society<br>Chitradurga District Branch<br>C/o 1st Floor, JCR Extension<br>7th cross, Behind Neelkamal<br>Showroom<br>CHITRADURGA -577501<br>M: 7899187128 |
| 3. | SRI. VIRANNA .S. ATHANI,<br>Secretary,<br>Indian Red Cross Society,<br>Bagalkote District Branch<br>Bilagi Cross, Near Darga, Khazi<br>Complex, Opposite Lingapur RC,<br>**BILAGI – 587 116**<br>**M: 6362900901** | 7. | Sri. S.G.Muranal,<br>Secretary,<br>Indian Red Cross Society,<br>Bijapur District<br>Plot No:82, Sollapura Road, K.C.Nagar,<br>Near DCC Bank, **Vijayapura**<br>(M) 9480534153 | 11. | Sri B. N. Ravikumar<br>District Secretary<br>Indian Red Cross Society,<br>Chikkaballapura District Branch<br>Old District Hospital Premises<br>CHIKKABALLAPURA– 562 101<br>M : 8494984545 |
| 4. | Sri Vaijinath Patil<br>Secretary,<br>Indian Red Cross Society<br>Bidar District Branch<br>Mailur Road, Gadha Chowka<br>Near Smt. Laxmibai Kamthane B.Ed.<br>College, BIDAR – 585403<br>☏: 9886121824 | 8. | Dr. Shwetha Shashidhar<br>Secretary<br>Indian Red Cross Society,<br>Chamarajanagara District Branch,<br>Room Number 112,<br>Basava Rajendra Hospital Campus,<br>#728, Mariyala, Nanjangud Main Road,<br>CHAMARAJANAGAR-571 313<br>M: 9480379638 / 7019387665 | ~~12.~~ | ~~Sri. Dhananjayamurthy,~~<br>~~Secretary~~<br>~~Indian Red Cross Society,~~<br>~~Davangere District Branch,~~<br>~~Sri Shamanur Shivashankarappa~~<br>~~Red Cross Bhavana, #302, "A"~~<br>~~Block, Devaraj Urs Layout,~~<br>~~DAVANAGERE -577 006~~<br>~~M: 98800 52280~~ |

Continued..2..

| | | | | | |
|---|---|---|---|---|---|
| 13 | Dr. Umesh R. Hallikeri<br>Secretary, Indian Red Cross Society,<br>Dharwad District Branch,<br>Red Cross Building, Near HPO,<br>Station Road, DHARWAD – 580 008<br>Ph: 0836-2444464<br>M: 7019823205 | 17. | Sri Ningappa M. Arera<br>Hon. Secretary,<br>Indian Red Cross Society,<br>Haveri District Branch<br>DISTRICT HOSPITAL COMPOUND<br>HAVERI – 581 110<br>M : 8971630393 | 21 | ~~Sri. S. S Vaidyanath,~~<br>~~Secretary,~~<br>~~Indian Red Cross Society,~~<br>~~Mysore District Branch,~~<br>~~1st Floor, A.V.N.S Market,~~<br>~~Vijaya Bank Building,~~<br>~~D. Devaraja Urs Road, K.R. Circle,~~<br>~~MYSURU – 570 024~~<br>~~(M) 9886829899~~ |
| 14. | Sri. Raveendra Shabadi<br>Secretary,<br>Indian Red Cross Society,<br>Kalaburgi District Branch<br>Room No.2A, Ground Floor,<br>Mini Vidhanasoudha,<br>D.C. Office Compound Premises,<br>Main Road, KALABURGI -585 102<br>☎ 08472-255317/(M)9448204560 | 18. | Dr. Srinivas Hyati<br>General Secretary<br>Indian Red Cross Society<br>Koppal District Branch<br>1st Floor, New District Hospital<br>Premises, Hosapete Road,<br>KOPPAL – 583231<br>Mobile: 9008996646/08539-225088<br>Email:ircskpl@gmail.com | 22. | Dr. K.M. Shivakumar<br>Medical Superintendent VIMS<br>& Secretary<br>Indian Red Cross Society,<br>Mandya District Branch, P.E.S.<br>Engineering College Road, Near Zilla<br>Panchayath, MANDYA - 571401<br>☎:08232-228730/400377<br>M: 9448345267<br>Email:ircsmdy@yahoo.com |
| 15. | Dr. Mohd Asharaf D. Samudri<br>Secretary,<br>Indian Red Cross Society,<br>Gadag District Branch<br>C/o. DGM Ayurvedic Medical College<br>Kalasapur Road, GADAG<br>M : 9964187315 / 8073041618 | 19. | Sri. M. Dhananjaya<br>Secretary, IRCS, Kodagu Dist. Branch<br>Bhagawan Glass-Plywoods-Hardware,<br>North Coorg Shopping Complex,<br>Main Road, Madikeri - 571 201<br>Kodagu<br>M: 98444 61777 / 9341779929<br>E-mail: dhananjeyasham@gmail.com | 23. | Sri Kishorechandra Hegde,<br>Secretary,<br>Indian Red Cross Society,<br>D.K. District Branch<br>Red Cross Bhavan, Behind D.C. Office<br>Compound, MANGALORE-575 001<br>M: **9902335288**<br>Email:ircsdkd@gmail.com |
| 16. | Sri. Shabbir Ahamed<br>Secretary<br>Indian Red Cross Society<br>Hassan District Branch<br>"Red Cross Bhavan".<br>Near Nehru Yuva Kendra,<br>Salagame Road, HASSAN – 573 201<br>(M) 9449460806/9141516430<br>e.mail: ircshassan@gmail.com | 20. | Sri. S. Nandish Kumar<br>Secretary, IRCS, Kolar Dist. Branch<br>S/o. D.C. Shreekantaiah<br>1st Main Road, 1st Cross,<br>Sultanthippasandra,<br>KOLAR – 563 101.<br>☎ 9448714809 / 8088075591 | 24. | Sri. Ataulla, Advocate<br>Secretary,<br>Indian Red Cross Society,<br>Raichur District Branch,<br>IRCS Blood Centre, First Floor,<br>Veerashaiva Kalyana Mantapa<br>RAICHUR – 584 101<br>(M) 8050227039<br>Email: ataulla99@gmail.com<br>Ataulla123@gmail.com |

**Continued..3..**

| | | | | | |
|---|---|---|---|---|---|
| 25 | Sri K.S. Shankaraiah<br>Secretary,<br>Indian Red Cross Society,<br>Ramanagara District Branch,<br>S/o. Archak Siddappa<br>No:41, Dolars Colony, Ward No:28,<br>Malleshwara Badavane,<br>RAMANAGARA TOWN – 562 159<br>M : 9845029567 | 26 | Dr. Dinesh. S<br>Secretary<br>Indian Red Cross Society,<br>Shivamogga District Branch<br>Indian Red Cross Society Building<br>RTO Office Road, Opp: to Press Trust Building, D.C. Office Compound<br>SHIVAMOGGA – 577 204<br>M: 9964194698 /9845353930<br>Email:redcrossshimoga@gmail.com | 27 | Dr. Chandrashekar B.M<br>District Health & Family Welfare Officer & Secretary<br>Indian Red Cross Society,<br>Tumkur District Branch,<br>Red Cross Bhavan, Ashoka Road,<br>TUMKUR – 572 101 |
| 28. | Dr. Gananath Shetty Yekkar<br>Hon. Secretary,<br>Indian Red Cross Society,<br>Udupi District Branch,<br>D.No.4-3-19G, Red Cross Bhavan,<br>Red Cross Road, Ajjarkad,<br>UDUPI District – 576 101<br>☏:0820-2532222 /9964583433<br>Email: ircsudupi@gamil.com | 29 | Sri. Jagadeesha S. Birakodikara<br>Secretary,<br>Indian Red Cross Society,<br>Karwar District Branch,<br>DHO Building Premises<br>Karwarar – 581301<br>Uttara Kannada District<br>☏: 9845223743<br>E-mail : birkodi@gmail.com | 30 | Sri. Mallannagouda Halimani<br>Secretary,<br>Indian Red Cross Society<br>Yadagiri District Branch,<br>Office of the Deputy Commissioner<br>Main Road, YADGIRI – 585 202<br>Ph.No.9886521808 |
| 31 | Smt. K.M. Rekha Prakash<br>Secretary,<br>Indian Red Cross Society,<br>Vijayanagar District Branch<br>No:145, 6th Cross,<br>N.C. Colony, Hospet – 583 201<br>Vijayanagar District<br>M: 8147491649<br>Email: kmrekhahpt@gmail.com | | | | |

**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/156/ಶೈವಿ/ರೆಡ್ ಕ್ರಾಸ್/2024-25

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-01, ದಿನಾಂಕ:31-12-2025

**ಸುತ್ತೋಲೆ**

**ವಿಷಯ:** ಯುವ ರೆಡ್ ಕ್ರಾಸ್ ಘಟಕಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ನೋಂದಣಿ ಶುಲ್ಕ ಮತ್ತು ವಿದ್ಯಾರ್ಥಿಗಳ ಸದಸ್ಯತ್ವ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿ ಮಾಡುವ ಬಗ್ಗೆ.

**ಉಲ್ಲೇಖ:**
1. ಪ್ರಧಾನ ಕಾರ್ಯದರ್ಶಿಗಳು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಇವರ ಪತ್ರ ಸಂಖ್ಯೆ:IRCS/YRC/RF-SMF/2441/25-26 ದಿನಾಂಕ:15-11-2025.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/ಶೈವಿ/156/ರೆಡ್ ಕ್ರಾಸ್/2024-25, ದಿ:21-05-2025.
3. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/ಶೈವಿ/03/ಸುತ್ತೋಲೆ/2024-25, ದಿ:11-06-2024.
4. ಸರ್ಕಾರದ ಆದೇಶ ಸಂಖ್ಯೆ:ಇಡಿ 38 ವಿವಿಧ 2016, ದಿ:17-06-2016.
5. ಸರ್ಕಾರದ ಆದೇಶ ಸಂಖ್ಯೆ:ಇಡಿ 64 ವಿವಿಧ 2011, ದಿ: 22-11-2011.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(4) ಮತ್ತು (5)ರ ಸರ್ಕಾರದ ಆದೇಶಗಳಲ್ಲಿ XVನೇ ಕೇಂದ್ರ ಅಧಿನಿಯಮ-1920 ರಡಿ ಸ್ಥಾಪಿತವಾದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಬಹುಮುಖ್ಯ ಅಂಗವಾದ ರೆಡ್ ಕ್ರಾಸ್ ಘಟಕವನ್ನು ಪ್ರಾರಂಭಿಸಲು ಹಾಗೂ ಈ ಮೂಲಕ ಮಾನವೀಯತೆ. ನಿಷ್ಪಕ್ಷಪಾತ. ತಟಸ್ಥತೆ. ಅಪರತಂತ್ರ. ಸ್ವಯಂಸೇವಾ ಮನೋಧರ್ಮ ಹಾಗೂ ಸರ್ವಲೌಕಿಕತ್ವದಂತಹ ತತ್ವಗಳನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸುವ ನಿಟ್ಟಿನಲ್ಲಿ ಯುವ ರೆಡ್ ಕ್ರಾಸ್ ಹೊಂದಿರುವ ಸಂಕಲ್ಪ ಹಾಗೂ ಉದ್ದೇಶಗಳನ್ನು ಈಡೇರಿಸಲು ಹಾಗೂ ಆರೋಗ್ಯ. ನಾಗರೀಕ ಹೊಣೆಗಾರಿಕೆ. ಸದ್ಭಾವನೆ ಮತ್ತು ಸ್ವಯಂ ಸೇವಾ ಮನೋಧರ್ಮಗಳಂತಹ ಆದರ್ಶ ಮತ್ತು ಪರಿಪಾಠಗಳನ್ನು ಯುವಕರಲ್ಲಿ ಸದೃಢಗೊಳಿಸುವುದಕ್ಕೆ ಅಭಿಮುಖವಾದ ರೆಡ್ ಕ್ರಾಸ್‌ನ ಪ್ರಯತ್ನಗಳಲ್ಲಿ ನೆರವಾಗಲು ಅನುವಾಗುವಂತೆ. ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿರುತ್ತದೆ.

ಅದರಂತೆ ಇಲಾಖಾ ವ್ಯಾಪ್ತಿಗೊಳಪಡುವ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳು ಯೂತ್ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಿ ರೂ.1500/- (ಒಂದು ಸಾವಿರದ ಐದು ನೂರು ರೂಪಾಯಿಗಳು ಮಾತ್ರ)ಗಳನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ. ಕರ್ನಾಟಕ ರಾಜ್ಯ ಶಾಖೆ. ಬೆಂಗಳೂರು ಇಲ್ಲಿಗೆ ಪಾವತಿಸಿ ನೋಂದಾಯಿಸಿಕೊಳ್ಳುವಂತೆ ಮತ್ತು ಕಾಲೇಜಿನ ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ಕಾಲೇಜು ಶುಲ್ಕವನ್ನು ಸಂಗ್ರಹಿಸುವಾಗ ಯೂತ್ ರೆಡ್ ಕ್ರಾಸ್ ಘಟಕದಡಿಯಲ್ಲಿ ವಾರ್ಷಿಕವಾಗಿ ರೂ.50/-ಗಳನ್ನು ಸಂಗ್ರಹಿಸುವಂತೆ ಹಾಗೂ ಸಂಗ್ರಹಿಸಿದ ಶುಲ್ಕದಲ್ಲಿ 30% (ರೂ.15/-) ಅನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ. ಬೆಂಗಳೂರು ಇಲ್ಲಿಗೆ ಪಾವತಿಸಿ. ಉಳಿದ 70% (ರೂ.35/-) ಗಳನ್ನು ಕಾಲೇಜಿನ ಯುವ ರೆಡ್ ಕ್ರಾಸ್ ಚಟುವಟಿಕೆಗಳಿಗೆ ಬಳಸಿಕೊಳ್ಳುವಂತೆ ಆದೇಶಿಸಲಾಗಿದ್ದು, ಸದರಿ ನೋಂದಣಿ ಶುಲ್ಕ ಮತ್ತು ವಿದ್ಯಾರ್ಥಿ ಶುಲ್ಕವನ್ನು ಪಾವತಿಸಲು ಕಾಲೇಜುಗಳಿಗೆ ಅನುಕೂಲವಾಗುವಂತೆ, ಸಮಯ, ಹಣ ಮತ್ತು ಮಾನವ ಶ್ರಮವನ್ನು ಉಳಿಸಲು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಸಾಫ್ಟ್ ವೇರ್ ಅಭಿವೃದ್ಧಿಪಡಿಸಿದೆ. ಶುಲ್ಕಗಳನ್ನು ಸದರಿ ಸಾಫ್ಟ್ ವೇರ್ ಮೂಲಕ ಪಾವತಿಸುವ ಬಗ್ಗೆ ವಿವರಗಳ **ಪ್ರತಿಯನ್ನು ಲಗತ್ತಿಸಿದೆ.**

ಆದ್ದರಿಂದ ಇದುವರೆವಿಗೂ ಯೂತ್ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸದೇ ಇರುವ ಕಾಲೇಜುಗಳು ಕಡ್ಡಾಯವಾಗಿ ಸದರಿ ಘಟಕವನ್ನು ಸ್ಥಾಪಿಸಲು ಹಾಗೂ ನೋಂದಣಿ ಶುಲ್ಕವನ್ನು ಪಾವತಿಸಲು ತುರ್ತಾಗಿ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ.
2. ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಶುಂಪಾಲರುಗಳು ವರ್ಷವಾರು ಪಾವತಿಸಿದ ಮೂಲ ಡಿಡಿ/ಚೆಕ್ ಲಗತ್ತಿಸಿ ರೆಡ್ ಕ್ರಾಸ್ ಸಂಸ್ಥೆಗೆ ಸಲ್ಲಿಸಿ ಸ್ವೀಕೃತಿಯನ್ನು ತಪ್ಪದೇ ಪಡೆಯುವುದು.

**ಪ್ರತಿಯನ್ನು:**

1. ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ, ನಂ. 26 ರೆಡ್ ಕ್ರಾಸ್ ಭವನ, 1ನೇ ಮಹಡಿ ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,ಬೆಂಗಳೂರು ಈ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
3. ಕಛೇರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಯುವ ರೆಡ್‌ಕ್ರಾಸ್ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ.

ಓದಲಾಗಿದೆ:- ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಐಆರ್‌ಸಿಎಸ್/ಯು.ರೆ.ಕ್ರಾ/ಮನವಿ/4406/2011 ದಿನಾಂಕ:05.12.2011.

ಪ್ರಸ್ತಾವನೆ:-

ಮೇಲೆ ಓದಲಾದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಈ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರು ಸರ್ಕಾರಕ್ಕೆ ಬರೆದ ಪತ್ರದಲ್ಲಿ - ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯು ಅಂತರರಾಷ್ಟ್ರೀಯ ಮಾನವೀಯ ಸೇವಾ ಸಂಸ್ಥೆಯಾಗಿದ್ದು, ಈ ಸಂಸ್ಥೆಯು ಕೇಂದ್ರೀಯ ಕಾಯ್ದೆಯಡಿಯಲ್ಲಿ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಆಕ್ಟ್ 1921ರಡಿಯಲ್ಲಿ ಸ್ಥಾಪನೆಗೊಂಡಿದ್ದು, ಕರ್ನಾಟಕದಲ್ಲಿ ಕೂಡ 1921 ರಿಂದ ಅಸ್ತಿತ್ವದಲ್ಲಿದ್ದು, ಈ ಸಂಸ್ಥೆಯ ಅಧ್ಯಕ್ಷರು ಗೌರವಾನ್ವಿತ ರಾಷ್ಟ್ರಪತಿಗಳಾಗಿದ್ದು ರಾಜ್ಯ ಶಾಖೆಗೆ ಘನವೆತ್ತ ರಾಜ್ಯಪಾಲರು ಅಧ್ಯಕ್ಷರಾಗಿರುತ್ತಾರೆ ಎಂದು ತಿಳಿಸುತ್ತಾ, ಈ ಸಂಸ್ಥೆಯು ಯುದ್ಧ ಸಮಯದಲ್ಲಿ ಗಾಯಗೊಂಡ ಸೈನಿಕರಿಗೆ, ನೈಸರ್ಗಿಕ ವಿಪತ್ತು, ವಿಕೋಪಗಳು ಸಂಭವಿಸಿದಾಗ ಪರಿಹಾರ ಕಾರ್ಯದಲ್ಲಿ ಹಾಗೂ ಸಾರ್ವಜನಿಕರಿಗೆ ಶುಶ್ರೂಷೆ ಮಾಡುವ ಸೇವಾ ಸಂಸ್ಥೆಯಾಗಿದೆ: ಆರೋಗ್ಯದ ಬಗ್ಗೆ ಅರಿವು ಮತ್ತು ಶಿಕ್ಷಣ, ರಕ್ತನಿಧಿಗಳು, ಅಂಗವಿಕಲರಿಗೆ ಸಾಧನ ಸಲಕರಣೆಗಳ ವಿತರಣೆ, ಪ್ರಥಮ ಚಿಕಿತ್ಸೆ, ಯುದ್ಧ, ಪ್ರಕೃತಿ ವಿಕೋಪಗಳಿಂದಾಗಿ ಚದುರಿಹೋಗಿರುವ ಕುಟುಂಬಗಳ ಸದಸ್ಯರನ್ನು ಪತ್ತೆ ಮಾಡಿ ಒಂದುಗೂಡಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದು, ಈ ಎಲ್ಲ ಮಾನವೀಯತೆಯ ಗುಣಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಸುವ ಉದ್ದೇಶದಿಂದ ಪ್ರತಿ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕವನ್ನು ಸ್ಥಾಪಿಸುವುದು ಅತ್ಯವಶ್ಯವಾಗಿರುತ್ತದೆ ಎಂದು ತಿಳಿಸುತ್ತಾ ಇದಕ್ಕೆ ಪೂರಕವಾಗಿ ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳು (ಪಾಲಿಟೆಕ್ನಿಕ್) ಒಮ್ಮೆ ರೂ.1500/- ಪಾವತಿಸಿ, ಆಯಾ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕವನ್ನು ಪ್ರಾರಂಭಿಸಲು ಹಾಗೂ ಕಾಲೇಜಿನ ಪ್ರವೇಶ ಶುಲ್ಕವನ್ನು ಪಡೆಯುವಾಗ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಪ್ರತಿ ವರ್ಷ ರೂ.50/-ರಂತೆ ಶುಲ್ಕವನ್ನು ಪಡೆಯಲು ಹಾಗೆ ಸಂಗ್ರಹಿಸಿದ ಶುಲ್ಕದಲ್ಲಿ ಶೇ.70ರಷ್ಟನ್ನು ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕದಲ್ಲಿ ಉಳಿಸಿಕೊಂಡು ಅದರ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವುದು ಹಾಗೂ ಉಳಿದ ಶೇ.30 ಅನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಕಳುಹಿಸುವಂತೆ ಆದೇಶಿಸಿ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

INDIAN RED CROSS SOCIETY KARNATAKA STATE BRANCH BANGALORE No. 2521 Date 23/12/11

YRC 26/12/11

22/12/11

ಸರ್ಕಾರವು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಇಡಿ 64 ವಿವಿಧ 2011 ಬೆಂಗಳೂರು, ದಿನಾಂಕ: 22.12.2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ ಕೋರಿಕೆಯಂತೆ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು. ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳು (ಪಾಲಿಟೆಕ್ನಿಕ್) ಒಂದು ಬಾರಿ ರೂ.1500/- (ರೂಪಾಯಿ ಒಂದು ಸಾವಿರದ ಐನೂರು) ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಗೆ ಪಾವತಿಸಿ ತಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಯುವ ರೆಡ್‌ಕ್ರಾಸ್ ಘಟಕವನ್ನು ಪ್ರಾರಂಭಿಸಲು ಅಗತ್ಯ ಕ್ರಮ ವಹಿಸಲು ಹಾಗೂ ಕಾಲೇಜಿನ ಪ್ರವೇಶ ಶುಲ್ಕವನ್ನು ಪಡೆಯುವಾಗ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಪ್ರತಿ ವರ್ಷ ರೂ.50/- (ರೂಪಾಯಿ ಐವತ್ತು) ರಂತೆ ಶುಲ್ಕವನ್ನು ಪಡೆಯಲು ಹಾಗೂ ಸಂಗ್ರಹಿಸಲಾದ ಶುಲ್ಕದಲ್ಲಿ ಶೇ.70ರಷ್ಟನ್ನು ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕದಲ್ಲಿ ಉಳಿಸಿಕೊಂಡು ಅದರ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲು ಹಾಗೂ ಉಳಿದ ಶೇ.30ರಷ್ಟನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಕಳುಹಿಸಿಕೊಡಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

22/12
(ಯು.ಬಿ.ಉಳವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಸಾಮಾನ್ಯ-2).

22/12

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇವರ ಆಪ್ತ ಕಾರ್ಯದರ್ಶಿಯವರಿಗೆ.
3. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ. (ವಿಶ್ವವಿದ್ಯಾಲಯ) (ಕಾಲೇಜು ಶಿಕ್ಷಣ) (ತಾಂತ್ರಿಕ ಶಿಕ್ಷಣ)
4. ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳು.
5. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-01.
6. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-01.
7. ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ, ನಂ.26, ರೆಡ್‌ಕ್ರಾಸ್ ಭವನ, ಒಂದನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-01.
8. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

YRC
2/7/16

693
2/7/16

2/7/16

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಯುವ ರೆಡ್ ಕ್ರಾಸ್ ಘಟಕಗಳಿಗೆ ಸಂಬಂಧಿಸಿದಂತೆ ಆಡಳಿತ ಹಾಗೂ ಕಾರ್ಯನೀತಿ ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ:ಇಡಿ 64 ವಿವಿಧ 2011, ದಿ:22/12/2011.
2. ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:IRCS/APG/YRC/3750/2015-16, ದಿ:31/03/2016.
3. ಸರ್ಕಾರದ ಆದೇಶ ಸಂಖ್ಯೆ:ಇಡಿ 38 ವಿವಿಧ 2016, ದಿ:06/04/2016.
4. ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ಇವರ ಪತ್ರ ಸಂಖ್ಯೆ:VCPS:2016-17/357, ದಿ:20/04/2016.

*****

XV ನೇ ಕೇಂದ್ರ ಅಧಿನಿಯಮ-1920ರಡಿ ಸ್ಥಾಪಿತವಾದ ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ಬಹುಮುಖ್ಯ ಅಂಗವಾದ ಯುವ ರೆಡ್ ಕ್ರಾಸ್ ಘಟಕವನ್ನು ಪ್ರಾರಂಭಿಸಲು ಉನ್ನತ ಶಿಕ್ಷಣ ಇಲಾಖೆಯ ಆಡಳಿತ ಹಾಗೂ ಶೈಕ್ಷಣಿಕ ನಿಯಂತ್ರಣಕ್ಕೊಳಪಡುವ ಎಲ್ಲಾ ಸರ್ಕಾರಿ/ಅನುದಾನಿತ ಹಾಗೂ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್/ಪಾಲಿಟೆಕ್ನಿಕ್ ಕಾಲೇಜುಗಳಿಗೆ ಮೇಲೆ ಕ್ರಮಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ನಿರ್ದೇಶನ ನೀಡಲಾಗಿತ್ತು. ಮುಂದುವರೆದು, ಮಾನವೀಯತೆ, ನಿಷ್ಪಕ್ಷಪಾತ, ತಟಸ್ಥನೀತಿ, ಅಪರತಂತ್ರ, ಸ್ವಯಂಸೇವಾ ಮನೋಧರ್ಮ ಹಾಗೂ ಸರ್ವಲೌಕಿಕತ್ವದಂತಹ ತತ್ವಗಳನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸುವ ದಿಕ್ಕಿನಲ್ಲಿ ಯುವ ರೆಡ್ ಕ್ರಾಸ್ ಹೊಂದಿರುವ ಸಂಕಲ್ಪ ಹಾಗೂ ಉದ್ದೇಶಗಳನ್ನು ಈಡೇರಿಸಲು ಹಾಗೂ ಆರೋಗ್ಯ, ನಾಗರೀಕ ಹೊಣೆಗಾರಿಕೆ, ಸದ್ಭಾವನೆ ಮತ್ತು ಸ್ವಯಂ ಸೇವಾ ಮನೋಧರ್ಮಗಳಂತಹ ಆದರ್ಶ ಮತ್ತು ಪರಿಪಾಠಗಳನ್ನು ಯುವಕರಲ್ಲಿ ಸದೃಢಗೊಳಿಸುವುದಕ್ಕೆ ಅಭಿಮುಖವಾದ ರೆಡ್ ಕ್ರಾಸ್‌ನ ಪ್ರಯತ್ನಗಳಲ್ಲಿ ನೆರವಾಗಲು ಅನುವಾಗುವಂತೆ ಒಂದು ಬಾರಿಗೆ ರೂ.1,500 ಗಳನ್ನು ಪಾವತಿಸಲು ಹಾಗೂ ಪ್ರವೇಶ ದಾಖಲಾತಿ ವೇಳೆ ಪ್ರತಿ ವಿದ್ಯಾರ್ಥಿಯಿಂದ ರೂ.50/-ಗಳನ್ನು ಶುಲ್ಕವಾಗಿ ಸಂಗ್ರಹಿಸಲು ಸೂಚಿಸಲಾಗಿತ್ತು. ಈ ರೀತಿ ಸಂಗ್ರಹಿಸಲಾಗುವ ಶುಲ್ಕದ ಸದ್ವಿನಿಯೋಗಕ್ಕಾಗಿ ಪೂರ್ವೋಕ್ತ ಆದೇಶದಲ್ಲಿ ಕ್ರಮಪದ್ಧತಿಗಳನ್ನು ನಿಗದಿಪಡಿಸಲಾಗಿತ್ತು.

ಯುವ ರೆಡ್‌ಕ್ರಾಸ್ ಸಂಸ್ಥೆಗಳ ಸ್ಥಾಪನೆ ಮತ್ತು ಉದ್ದೇಶಗಳನ್ನು ಈಡೇರಿಸಲು ಯುವ ರೆಡ್ ಕ್ರಾಸ್ ಘಟಕ ಸರ್ಕಾರದ ಅನುಮೋದನೆ ಹಾಗೂ ಅಧಿಕೃತ ಮಾನ್ಯತೆ ಪಡೆದ ಏಕರೂಪದ ಮಾರ್ಗಸೂಚಿಗಳನ್ನು ರೂಪಿಸುವುದು, ಎಲ್ಲಾ ಕಾಲೇಜುಗಳ ಸ್ಥಿರ ಚಟುವಟಿಕೆಗಳನ್ನು ಮಾಡುವುದು ಮತ್ತು ಕಾಲೇಜುಗಳ ಕಾರ್ಯನಿರ್ವಹಣೆಯಲ್ಲಿ ಹೊಂದಾಣಿಕೆ ತರುವುದು, ರೆಡ್ ಕ್ರಾಸ್ ಸಂಸ್ಥೆ ಭಾವಿಸಿದಂತೆ ಇಂದಿನ ತೀವ್ರ ಹಾಗೂ ತುರ್ತು ಅವಶ್ಯಕತೆಗಳಾಗಿರುತ್ತವೆ. ತತ್ಪರಿಣಾಮವಾಗಿ, ಕಾಲೇಜುಗಳಲ್ಲಿನ ಯುವ ರೆಡ್ ಕ್ರಾಸ್ ಘಟಕಗಳ ಕಾರ್ಯ ಚಟುವಟಿಕೆಗಳಲ್ಲಿ ಏಕಪ್ರಕಾರತೆ, ಋಜುತ್ವ, ಹೊಣೆಗಾರಿಕೆ, ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಗಳನ್ನು ಖಚಿತಪಡಿಸುವ ನಿಟ್ಟಿನಲ್ಲಿ ಎನ್.ಸಿ.ಸಿ., ಎನ್.ಎಸ್.ಎಸ್., ಮತ್ತು ರೋವರ್ಸ್ &

---2

ರೇಂಜರ್ಸ್ ನಂತಹ ಸಂಸ್ಥೆಗಳ ಮೇಲ್ಪಂಕ್ತಿಯನ್ನು ಅನುಸರಿಸಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಿಂದ ಆಡಳಿತ ಕಾರ್ಯನೀತಿ ಹಾಗೂ ಆರ್ಥಿಕ ನಿರ್ದೇಶನಗಳನ್ನು ಮತ್ತು ಕ್ರಮವಿಧಿ/ಕಾರ್ಯಕ್ರಮ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ.

ಅದರಂತೆ ಪೂರ್ವೋಕ್ತ ಕರಡು ಮಾರ್ಗಸೂಚಿಗಳನ್ನು ಜಾರಿಗೆ ತರುವಂತೆ ಹಾಗೂ ಅವುಗಳನ್ನು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಎಲ್ಲಾ ಕಾಲೇಜುಗಳು/ಪಾಲಿಟೆಕ್ನಿಕ್‌ಗಳು ಕಟ್ಟುನಿಟ್ಟಾಗಿ ಅನುಸರಿಸುವ ನಿಟ್ಟಿನಲ್ಲಿ ಕ್ರಮವಹಿಸುವಂತೆ ಕೋರಿ ಮೇಲೆ ಕ್ರ.ಸಂ.02 ರಲ್ಲಿ ಓದಲಾದ ಪತ್ರದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಮಾರ್ಗಸೂಚಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಸಂಬಂಧದಲ್ಲಿ ಸಲಹೆ-ಸೂಚನೆಗಳನ್ನು ನೀಡಲು ಮೇಲೆ ಓದಲಾದ ಕ್ರ.ಸಂ.03ರ ಆದೇಶದನ್ವಯ ಡಾ॥ ಎ.ಹೆಚ್.ರಾಜಾಸಾಬ, ಉಪ ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ಇವರ ಅಧ್ಯಕ್ಷತೆಯಲ್ಲಿ ಪರಿಣಿತರ ಸಮಿತಿಯನ್ನು ರಚಿಸಲಾಗಿತ್ತು. ದಿನಾಂಕ:19/04/2016ರಂದು ನಡೆದ ಸಭೆಯಲ್ಲಿ ಸುಧೀರ್ಘ ಪರ್ಯಾಲೋಚನೆ ನಡೆಸಿ ಕರಡು ಮಾರ್ಗಸೂಚಿಗಳಲ್ಲಿನ ಪ್ರತಿಯೊಂದು ಅಂಶಗಳನ್ನು ಪರಿಶೀಲಿಸಿದ ತರುವಾಯ ಸದಸ್ಯರುಗಳು ಸೂಚಿಸಿದ ಸೇರ್ಪಡೆ ಮತ್ತು ವಿಲೋಪನೆಗಳನ್ನು ಅಳವಡಿಸಿಕೊಂಡ ಸಮಿತಿಯಿಂದ ಪರಿಷ್ಕೃತ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ.

ಸಮಿತಿಯ ಅಧ್ಯಕ್ಷರಾದ ಡಾ॥ ಎ.ಹೆಚ್.ರಾಜಾಸಾಬ, ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ಇವರು ಮೇಲೆ ಓದಲಾದ ಕ್ರ.ಸಂ.04ರಲ್ಲಿನ ಆದೇಶದನ್ವಯ ಸಲ್ಲಿಸಿದ ಪರಿಷ್ಕೃತ ಮಾರ್ಗಸೂಚಿಗಳನ್ನು ಸಮಗ್ರವಾಗಿ ಪರಾಮರ್ಶಿಸಿದ ತರುವಾಯ ಪರಿಗಣಿಸಿದ ಸರ್ಕಾರವು ಉನ್ನತ ಶಿಕ್ಷಣ ಇಲಾಖೆಯಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಯುವ ರೆಡ್ ಕ್ರಾಸ್ ಘಟಕಗಳ ಕಾರ್ಯಚಟುವಟಿಕೆ/ಕ್ರಮವಿಧಿಗಳನ್ನು ಫಲಪ್ರದವಾಗಿ/ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ದೇಶದಲ್ಲಿಯೇ ಪ್ರಥಮವಾಗಿ ವ್ಯಾಪಕ ಹಾಗೂ ವಿಸ್ತೃತ ಮಾರ್ಗಸೂಚಿಗಳನ್ನು ರೂಪಿಸಲು ಉದ್ದೇಶಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 38 ವಿವಿಧ 2016, ಬೆಂಗಳೂರು, ದಿನಾಂಕ:17/06/2016**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆಡಳಿತ ಮತ್ತು ಶೈಕ್ಷಣಿಕ ಅಧಿಕಾರ ವ್ಯಾಪ್ತಿಗೊಳಪಡುವ ಎಲ್ಲಾ ಸರ್ಕಾರಿ/ಅನುದಾನಿತ ಹಾಗೂ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್/ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಯುವ ರೆಡ್ ಕ್ರಾಸ್ ಚಟುವಟಿಕೆಗಳ ಕಾರ್ಯನಿರ್ವಹಣೆಯಲ್ಲಿ ಏಕಪ್ರಕಾರತೆ, ಋಜುತ್ವ, ಹೊಣೆಗಾರಿಕೆ, ವಿಶ್ವಾಸರ್ಹತೆ ಮತ್ತು ಪಾರದರ್ಶಕತೆ ತರಲು ಈ ಆದೇಶದೊಂದಿಗೆ ಅನುಬಂಧಿಸಲಾಗಿರುವ ಅನುಸೂಚಿ-ಎ ಮತ್ತು ಅನುಸೂಚಿ-ಬಿ ರಲ್ಲಿ ನಿಯಮಿಸಲಾಗಿರುವ ಆಡಳಿತ, ಕಾರ್ಯನೀತಿ ಮತ್ತು ಆರ್ಥಿಕ ನಿರ್ದೇಶನಗಳನ್ನು ಹಾಗೂ ಕಾರ್ಯಕ್ರಮ/ಕ್ರಮವಿಧಿ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದೆ.

---3

ಪೂರ್ವೋಕ್ತ ಆಡಳಿತ, ಕಾರ್ಯನೀತಿ ಮತ್ತು ಆರ್ಥಿಕ ನಿರ್ದೇಶನಗಳನ್ನು ಹಾಗೂ ಕಾರ್ಯಕ್ರಮ/ಕ್ರಮವಿಧಿ ಮಾರ್ಗಸೂಚಿಗಳಿಗೆ ಬದ್ಧರಾಗಿ ಅವುಗಳನ್ನು ಚಾಚೂತಪ್ಪದೇ ಪರಿಪಾಲಿಸಲು ಎಲ್ಲಾ ಸರ್ಕಾರಿ, ಅನುದಾನಿತ/ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್/ ಇಂಜಿನಿಯರಿಂಗ್ ಕಾಲೇಜುಗಳಿಗೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಲ್.ಸುಬ್ರಮಣ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ಸಾಮಾನ್ಯ-2)

ಇವರಿಗೆ:-

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4) ಕುಲಪತಿಗಳು/ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು.
5) ಅಧ್ಯಕ್ಷರು, ಭಾರತೀಯ ರೆಡ್ ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್ ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7) ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳು/ಪಾಲಿಟೆಕ್ನಿಕ್‌ಗಳು-(ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಮೂಲಕ).
8) ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು-(ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆಯ ಮೂಲಕ).
9) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.